

# ವಿಶ್ವದ ಅತೀ ಉದ್ದದ ಸೇತುವೆ!

**ಚೀ**ನಾದ ಶಾನ್ಡಂಗ್ ಪ್ರಾಂತ್ಯದ ಕ್ವಿಂಗ್‌ಡಾವೋ ನಗರದೊಡನೆ ಹ್ವಾಂಗ್‌ಡಾವೋ ನಗರಕ್ಕೆ ಸಂಪರ್ಕ ಕಲ್ಪಿಸುವ ದಿ ಕ್ವಿಂಗ್‌ಡಾವೋ ಹೈವೇಯನ್ ಬ್ರಿಡ್ಜ್ ಪ್ರಪಂಚದ ಅತೀ ಉದ್ದದ ಸೇತುವೆ ಎಂದು ಗಿನ್ನಿಸ್ ದಾಖಲೆಯಲ್ಲಿ ಸ್ಥಾನ ಪಡೆದಿದೆ.

24.4 ಮೈಲು ಉದ್ದನೆಯ ಈ ಸೇತುವೆಯು ಹಿಂದಿನ ವಿಶ್ವ ದಾಖಲೆಯ ಸೇತುವೆಗಿಂತ ಸುಮಾರು 3 ಮೈಲು ಹೆಚ್ಚು ಉದ್ದವಿದೆ. 2005 ಜೂನ್ ತಿಂಗಳಲ್ಲಿ ಪ್ರಾರಂಭಿಸಿ 22ರ ಡಿಸೆಂಬರ್ 2010ರಲ್ಲಿ ಈ ಬೃಹತ್ ಸೇತುವೆಯ ನಿರ್ಮಾಣ ಕಾರ್ಯ ಮುಗಿದಿದೆ. ಇದಕ್ಕಾಗಿ ಸುಮಾರು 9 ಶತಕೋಟಿ ಡಾಲರ್ (ಸುಮಾರು 411,750,450,000,000 ರೂಪಾಯಿ!) ಹಣ ವೆಚ್ಚವಾಗಿದೆ. ಜಿಯಾಜ್ವೌ ಕೊಲ್ಲಿಯಲ್ಲಿ ಕಟ್ಟಲಾದ 6 ಲೇನ್ ರಸ್ತೆಗಳುಳ್ಳ ಈ ಬ್ರಿಡ್ಜ್ 5200ಕ್ಕೂ ಹೆಚ್ಚಿನ ಕಂಬಗಳ ಆಧಾರವನ್ನು ಹೊಂದಿದೆ.



ಸುಮಾರು 10,000 ಕೆಲಸಗಾರರು ಎರಡೂ ದಿಕ್ಕಿನಿಂದ, ಎರಡು ಪಾಳಿಗಳಲ್ಲಿ ಹಗಲಿರುಳೂ ಕಟ್ಟಿ ಮುಗಿಸಿದ ಸೇತುವೆಯು ಈ ವರ್ಷದ ಕೊನೆಗೆ ಸಂಚಾರಕ್ಕೆ ಮುಕ್ತವಾಗಲಿದೆ. ಆಗ ದಿನವೊಂದಕ್ಕೆ 30,000ಕ್ಕೂ ಹೆಚ್ಚಿನ ವಾಹನಗಳು ಓಡಾಡಬಹುದೆಂಬ ನಿರೀಕ್ಷೆ ಇದೆ. ವಿಶ್ವ ದಾಖಲೆಯ ಹಿರಿಮೆಯನ್ನು ಹೊತ್ತ ಈ ಸೇತುವೆಯು ಚೀನಾದ ನಿರ್ಮಾಣ ತಾಂತ್ರಿಕತೆಯ ಅತ್ಯದ್ಭುತ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

■ ವಿದ್ಯಾ ಹಾಲಭಾವಿ